**Code No. 18 Y**

**ವಾಣಿಜ್ಯ ಪರೀಕ್ಷೆಗಳು**

# ಕನ್ನಡ ಶೀಘ್ರಲಿಪಿ — ಪ್ರೌಢ ದರ್ಜೆ — ದ್ವಿತೀಯ ಪತ್ರಿಕೆ
# (ವಿಸ್ತರಿಸುವಿಕೆ)

ಜನವರಿ, 2019

ವೇಳೆ { ಉಕ್ತಲೇಖನ : 5 ನಿಮಿಷಗಳು
ವಿಸ್ತರಿಸುವಿಕೆ : 2 ಗಂಟೆಗಳು }

ಪರಮಾವಧಿ ಅಂಕಗಳು : 100

***ಓದುಗರಿಗೆ ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು ಒಂದು ನಿಮಿಷಕ್ಕೆ ಇನ್ನೂರ ಅರವತ್ತು (260) ಅಕ್ಷರಗಳ ವೇಗದಲ್ಲಿ ಪ್ರಶ್ನೆ ಪತ್ರಿಕೆಯಲ್ಲಿ ಸೂಚಿಸಿದ ರೀತಿಯಲ್ಲೇ ಓದತಕ್ಕದ್ದು.
2) ಉಕ್ತಲೇಖನ ಮುಗಿದ ನಂತರ ಅಭ್ಯರ್ಥಿಗಳಿಗೆ ಅವರ ಶೀಘ್ರಲಿಪಿಯ ಟಿಪ್ಪಣಿಗಳನ್ನು ಅವಶ್ಯವಾಗಿರುವಂತೆ ಸರಿಯಾದ ನಮೂನೆಯಲ್ಲಿ ಸೂಕ್ತವಾಗಿ ವಿಸ್ತರಿಸಬೇಕೆಂದು ಸೂಚಿಸತಕ್ಕದ್ದು.
3) ಪ್ರಶ್ನಾಂಕಗಳು ವೇಗ ವಿಷಯದ ಭಾಗವಾಗಿರುವುದರಿಂದ, ಅವುಗಳನ್ನು ಹಾಗೂ ಪ್ರಶ್ನೆ ನಮೂನೆಯನ್ನು ***ಎತ್ತರಿಸಿದ ಧ್ವನಿಯಲ್ಲಿ*** ಓದತಕ್ಕದ್ದು.
4) ಪ್ರತಿಯೊಂದು ಪ್ರಶ್ನೆಗೂ ನಿಗದಿಯಾಗಿರತಕ್ಕ ಅಂಕಗಳನ್ನು ಪ್ರಶ್ನೆಗಳ ಉಕ್ತಲೇಖನ ಕೊಡುವಾಗ ಓದಕೂಡದು. ಉಕ್ತಲೇಖನ ಮುಗಿದ ನಂತರ ಈ ಅಂಶಗಳನ್ನು ಅಭ್ಯರ್ಥಿಗಳಿಗೆ ತಿಳಿಸತಕ್ಕದ್ದು.

---

***ಪ್ರಶ್ನೆ ಒಂದು :*** ಸರ್ಕಾರಿ ಅಧಿಸೂಚನೆಯನ್ವಯ ಜಾರಿಗೆ ಬಂದಿರುವ ಕರ್ನಾಟಕ ಸಾರ್ವಜನಿಕ ಉದ್ಯೋಗ ಆದೇಶ, 2013 ರ ಹಿನ್ನೆಲೆಯಲ್ಲಿ
$\frac{1}{4}$ ಆಡಳಿತ ವಿಭಾಗ ಎಲ್ಲಾ ವೃಂದಗಳ ಹುದ್ದೆಗಳಿಗೆ/ ಅನ್ವಯಿಸುವ ಪದೋನ್ನತಿ ಹಾಗೂ ನೇರ ನೇಮಕಾತಿಯಡಿಯಲ್ಲಿ ಶೇಕಡ 8 ರ ಪ್ರಮಾಣದಲ್ಲಿ ಮೀಸಲಿರಿಸಬಹುದಾದ ಸರ್ಕಾರಿ ಅಧಿಸೂಚನೆ, ಸೇರ್ಪಡೆ ಹಾಗೂ
$\frac{1}{2}$ ತಿದ್ದುಪಡಿಗಳಲ್ಲಿ ಗುರುತಿಸಿದೆ./ ಕರ್ನಾಟಕ ಸರ್ಕಾರ ಸಚಿವಾಲಯ ಸೇವೆಯ ಅಧಿಕಾರಿ ಹಾಗೂ ನೌಕರರ ಸ್ಥಳೀಯ ವೃಂದ ಅಥವಾ ರಾಜ್ಯ ವೃಂದ ಆಯ್ಕೆ ಮಾಡಿಕೊಳ್ಳುವ ಕುರಿತು ಅಭಿಮತವನ್ನು ಸಕ್ಷಮ ಪ್ರಾಧಿಕಾರದಿಂದ ಪಡೆದ/ ಅರ್ಹತಾ ಪ್ರಮಾಣ $\frac{3}{4}$
ಪತ್ರದೊಂದಿಗೆ ದಿನಾಂಕ : 29.10.2018 ರ ಅಧಿಸೂಚನೆ–1 ರ ಅನುಬಂಧ–'ಸಿ'ಯಲ್ಲಿ ಸುತ್ತೋಲೆ ಹೊರಡಿಸಿದ ದಿನಾಂಕದಿಂದ 30 ದಿನಗಳ ಒಳಗಾಗಿ ಸಲ್ಲಿಸುವಂತೆX 1
ಸೂಚಿಸಿದೆ.

**ಸರ್ಕಾರದ ಅಧೀನ ಕಾರ್ಯದರ್ಶಿ, ಇವರ ಸಹಿಗೆ ಸುತ್ತೋಲೆಯನ್ನು ತಯಾರಿಸಿ.**

(ಅಂಕಗಳು : 25)

**ಪ್ರಶ್ನೆ ಎರಡು :** ವರ್ಷಕ್ಕೊಮ್ಮೆ ಹಾಸನ ಜಿಲ್ಲೆಯ
ಹಾಸನಾಂಬೆ ಗರ್ಭಗುಡಿಯಲ್ಲಿ ದರ್ಶನ
$\frac{1}{4}$ ಪಡೆಯುವವರು ಕೃ/ತಾರ್ಥರು ಎಂಬುದು
ಸಾತ್ವಿಕರ ನಂಬಿಕೆ. ಅಶ್ವಯುಜ ಮಾಸದ
ಹುಣ್ಣಿಮೆ ನಂತರ ಗರ್ಭಗುಡಿ ತೆರೆಯಲಾಗುತ್ತದೆ.
ದೇವಿ ಮುಡಿಸಿದ್ದ ಹೂ ಗರ್ಭಗುಡಿಯಲ್ಲಿ
ಹಚ್ಚಿರುವ ದೀಪ, ನೈವೇದ್ಯ ಕಾಣಲು ಭಕ್ತರಿಗೆ
ವಿಶೇಷ ಅನುಕೂಲ. 12ನೇ ಶತಮಾನದಲ್ಲಿ
$\frac{1}{2}$ ನಿರ್ಮಿಸಿದ ದೇವಸ್ಥಾನದ ನೂತ/ನ ಗೋಪುರ
ಅಕ್ಟೋಬರ್ 25ರಂದು ಉದ್ಘಾಟನೆಯಾಗಲಿದೆ.
ಅರಸು ವಂಶಸ್ಥರು ಬನ್ನಿಮರ ಕಡಿಯುವ
ಮೂಲಕ ಪೂಜೆ ಸಲ್ಲಿಸಿ ಗರ್ಭಗುಡಿ
ತೆರೆಯಲಾಗುತ್ತದೆ. ನವೆಂಬರ್ 5ರ ವರೆಗೆ
$\frac{3}{4}$ ಬಾಗಿ/ಲು ತೆರೆದಿರುತ್ತದೆ. ದೇವಿಗೆ ಅರಿಶಿನ,
ಕುಂಕುಮ, ಬಳೆ ಅರ್ಪಿಸಿ ಬಲಿಪಾಡ್ಯದ 3ನೇ
ದಿನ ಗರ್ಭಗುಡಿ ಭಕ್ತರ ಸಮ್ಮುಖದಲ್ಲಿ
ಮುಚ್ಚಲಾಗುತ್ತದೆ. ಭಕ್ತರು ಈ ಅತ್ಯುತ್ತಮ
2 ಅವಕಾಶವನ್ನು ಉಪXಯೋಗಿಸಿಕೊಳ್ಳಲು
ಕೋರಿ, **ಪತ್ರಿಕಾ ಪ್ರಕಟಣೆಯನ್ನು ತಯಾರಿಸಿ.**
(ಅಂಕಗಳು : 20)

**ಪ್ರಶ್ನೆ ಮೂರು :** ಭಾರತದ ಪ್ರಧಾನ ಮಂತ್ರಿಗಳು
ಮನವಿ ಹೊರಡಿಸಿ ರಾಷ್ಟ್ರದ ಕ್ಲಿಷ್ಟ
ಪರಿಸ್ಥಿತಿಯನ್ನು ಎದುರಿಸುತ್ತಿದೆ. ಸರ್ವಧರ್ಮ
ಸ/ಮನ್ವಯಕ್ಕಾಗಿ ಹೆಮ್ಮೆಪಡುವ ನಮ್ಮ ದೇಶ $\frac{1}{4}$
ಧರ್ಮದ ಹೆಸರಿನಲ್ಲಿ ಅಪಾಯಕಾರಿ ಸ್ಥಿತಿ
ಎದುರಿಸುತ್ತಿದೆ. ಭಾರತವು ಮತೀಯ
ಸೌಹಾರ್ದತೆಗೆ ಹೆಸರಾಗಿದೆ. ಎಲ್ಲರೂ
ಶಾಂತಿಯಿಂದ ಒಟ್ಟಾಗಿ ಬಾಳಿ, ರಾ/ಷ್ಟ್ರದ $\frac{1}{2}$
ಪ್ರಗತಿಗೆ ಕೊಡುಗೆ ನೀಡಿದ್ದಾರೆ. ಮತೀಯ
ಗಲಭೆ ಜನರ ನಡುವೆ ಪ್ರೀತಿ ವಿಶ್ವಾಸ ಹಾಳು
ಮಾಡಬೇಕೆ ? ಧರ್ಮದ ಭೇದ ಭಾವಗಳು
ಅಡ್ಡಗೋಡೆಯಾಗಬೇಕೆ, ರಾಷ್ಟ್ರದ ಪ್ರಗತಿಗೆ
ಅಡ್ಡಿಯಾಗಲು/ ಅವಕಾಶ ಮಾಡಿಕೊಡಬೇಕೆ $\frac{3}{4}$
ಎಂದು ಹೇಳಿ ಎಲ್ಲರೂ ಒಮ್ಮತದಿಂದ
ಬಾಳೋಣ, ನಾವೆಲ್ಲರೂ ಒಂದೇ, ಮತೀಯ
ಸೌಹಾರ್ದ ಕಾಪಾಡುವಲ್ಲಿ ಭಾರತವು
ಮೇಲ್ಪಂಕ್ತಿಯಾಗಲಿ, ಶಾಂತಿಗೆ ಸದವಕಾಶ
ನೀಡಬೇಕೆಂದುX ಕೋರುವಂಥ 3
**ಮನವಿಯನ್ನು ತಯಾರಿಸಿ.**(ಅಂಕಗಳು : 15)

**ಪ್ರಶ್ನೆ ನಾಲ್ಕು :** ಕರ್ನಾಟಕ ಸರ್ಕಾರ
ಸಚಿವಾಲಯ ಸಹಕಾರ ಸಂಘದ 62ನೇ
ವಾರ್ಷಿಕ ಸಭೆಯು ವಿಧಾನಸೌಧದಲ್ಲಿ 23ನೇ
ಸೆಪ್ಟಂಬರ್ ಬೆಳಿಗ್ಗೆ ಹತ್ತು ಗಂ/ಟೆಗೆ $\frac{1}{4}$
ನಡೆಯಲಿದೆ. ಕಾರ್ಯಕ್ರಮ ಹಿಂದಿನ ಸಾಲಿನ

ವರದಿ ಮಂಡನೆ ಸಂಘದ ಜಮಾ–ಖರ್ಚು,
ಲಾಭ–ನಷ್ಟ, ಆಸ್ತಿ–ಜವಾಬ್ದಾರಿ ತಃಖ್ತೆಗಳ
ಪರಿಶೀಲನೆ ಮತ್ತು ಅನುಮೋದನೆ, ಪ್ರಸ್ತುತ
$\frac{1}{2}$ ಸಾಲಿನ ಮುಂಗಡ/ ಪತ್ರದ ಅಂಗೀಕಾರ,
ಆಡಳಿತ ಮಂಡಳಿಯ ಸದಸ್ಯರ ಚುನಾವಣೆ.
ಸದಸ್ಯರು ತಮ್ಮ ಪರವಾಗಿ ಸಭೆಯಲ್ಲಿ ಹಾಜರು
ಇದ್ದು ಮತ ನೀಡಲು ಬೇರೊಬ್ಬರಿಗೆ ಅಧಿಕಾರ
$\frac{3}{4}$ ಕೊಡಬಹುದು. ಉಪಹಾರ/ಕೂಟ ಒಂದು
ಗಂಟೆಗೆ . **ತಿಳುವಳಿಕೆ ಪತ್ರವನ್ನು ತಯಾರಿಸಿ.**
(ಅಂಕಗಳು : 20)

***ಪ್ರಶ್ನೆ ಐದು :*** ಕಾರ್ಯನಿರ್ವಾಹಕ
ಅಭಿಯಂತರರು, ಬೆಳಗಾವಿ ವಿಭಾಗ ಇವರು
ಅಧೀಕ್ಷಕ ಅಭಿಯಂತರರು, ಬೆಂಗಳೂರು
4 ಇವರಿಗೆಗೆ ಪXತ್ರ ಬರೆದು ಅವರು ಗೋಕಾಕ್
ರಸ್ತೆಯ 8ನೇ ಮೈಲಿ ಕಲ್ಲಿನ ಹತ್ತಿರ ಸೇತುವೆಯನ್ನು
ಕಟ್ಟಲು ಟೆಂಡರುಗಳು ಬಂದಿದ್ದು, ಅದರಲ್ಲಿ
ಸಂದೀಪ್ ಮತ್ತು ಕಂಪನಿ
ಉತ್ತಮವಾದುದೆಂದೂ, ಈ ಸಂಸ್ಥೆಯು
ಇಲಾಖೆ/ಯ ಅನೇಕ ಕೆಲಸಗಳನ್ನು $\frac{1}{4}$
ತೃಪ್ತಿಕರವಾಗಿ ನಿರ್ವಹಿಸಿದ್ದರು ಅತೀ ಕಡಿಮೆ
ಬೆಲೆ ಸೂಚಿಸಿರುವುದರಿಂದ ಇವರಿಗೆ ಕೆಲಸ
ವಹಿಸಲು ಶಿಫಾರಸ್ಸು ಮಾಡುತ್ತಾರೆ. ಸಂಸ್ಥೆಯು
ಒಂದು ವರ್ಷದ/ಲ್ಲಿ ಕೆಲಸ ಮುಗಿಸಲು $\frac{1}{2}$
ಒಪ್ಪಿದ್ದಾರೆಂದು ತಿಳಿಸಿ ಟೆಂಡರುದಾರರ ಪಟ್ಟಿ
ಅವಗಾಹನೆ ಮತ್ತು ಒಪ್ಪಿಗೆಗಾಗಿ ಲಗತ್ತಿಸಿರುತ್ತಾರೆ.
ಒಪ್ಪಿಗೆ ಪಡೆದ ನಂತರ ಮುಂದಿನ ತಿಂಗಳ
ಮೊದಲ ವಾರದಲ್ಲಿ/ ಅವರಿಗೆ ಕೆಲಸ $\frac{3}{4}$
ವಹಿಸಿಕೊಡುವುದಾಗಿ ನಂತರ ಕೆಲಸದ ಪ್ರಗತಿಯ
ಬಗ್ಗೆ ತಿಳಿಸುತ್ತಾರೆಂಬ **ಸರ್ಕಾರಿ ಪತ್ರವನ್ನು
ಕಾರ್ಯ ನಿರ್ವಾಹಕ ಅಭಿಯಂತರರ ಸಹಿಗೆ
ತಯಾರಿಸಿ.**X (ಅಂಕಗಳು : 20) 5